

# ಪ್ರಚಾರದ ಗೀಳು

ನರೇಂದ್ರ ಪೈ

ಈ ಕಾಲದ ಕಥನ

ನನ್ನ ಅನುಭವ ಮತ್ತು ಗ್ರಹಿಕೆ ಈ ಮುಂದಿನ ಮಾತುಗಳ ಬಹುದೊಡ್ಡ ಮಿತಿ ಎಂಬುದನ್ನು ನೆನಪಿನಲ್ಲಿಟ್ಟುಕೊಂಡು ಎರಡು ಮಾತು.

ಇಂದು ನಮಗೆ ಹಿಂದಿನಂತೆ ಇನ್ನೂರುಮುನ್ನೂರು ಪುಟಗಳ ಜನಪ್ರಿಯ ಕಾದಂಬರಿಯನ್ನು ಕೂಡ ಪಟ್ಟು ಹಿಡಿದು ಕೂತು ಓದುವುದು ಸಾಧ್ಯವಿಲ್ಲವೇನೋ ಅನಿಸುತ್ತಿದೆ. ಮೊಬೈಲ್ ಸ್ಕ್ರೀನಿನ ಮೇಲೆ ಪ್ರತಿ ಕ್ಷಣವೂ ಬೆರಳು ಸರಿಸಿದಂತೆ ಬದಲಾಗಬಲ್ಲ ವಸ್ತು, ವಿಷಯ, ವೈವಿಧ್ಯಕ್ಕೆ ನಮ್ಮ ಮನಸ್ಸು ಒಗ್ಗಿಕೊಳ್ಳುತ್ತಿದೆ. ಅತ್ಯಂತ ಜನಪ್ರಿಯ ಅಂತರ್ಜಾಲ ತಾಣಗಳನ್ನು ಗಮನಿಸಿದರೂ ಪ್ರತಿ ಕ್ಷಣವೂ ಹೊಸದನ್ನು ಕೊಡುವ ಫೇಸ್‌ಬುಕ್, ಇನ್‌ಸ್ಟಾಗ್ರಾಮ್ ತರದ ಸೋಶಿಯಲ್ ಮೀಡಿಯಾ ಇದನ್ನು ಪುಷ್ಟೀಕರಿಸುತ್ತದೆ. ನಮ್ಮ ಮಂದಿಗೆ ವ್ಯಾಟ್ಸ್‌ಆ್ಯಪ್ ತರದ ಸಂದೇಶ ವಾಹಕದಲ್ಲಿ ಬರುವ ಸುದ್ದಿ, ಕತೆ, ಲೇಖನ ಕೂಡ ಚಿಕ್ಕದಾಗಿರಬೇಕು. ಸ್ವಲ್ಪ ಉದ್ದವಿದ್ದರೆ ಅದನ್ನು ನಾಳೆ ನೋಡುವಾ ಎನ್ನುತ್ತಾರೆ. ನಾಳೆ ಮತ್ತಷ್ಟೇ ಬಂದು ಬೀಳುತ್ತದೆ. ಪುರುಸೊತ್ತಾದರೂ ಎಲ್ಲಿದೆ ನಮಗೆ ಇಷ್ಟೆಲ್ಲಾ ಕಥನಗಳಿಗೆ! ಇಂದಿನ ಟೀವಿ ಪರದೆಗಳನ್ನು ಗಮನಿಸಿದರೂ ಅವು ಬರೇ ಒಂದು ವಿಷಯದ ಬಗ್ಗೆ ಮಾತ್ರ ತೋರಿಸುತ್ತಿಲ್ಲ/ಹೇಳುತ್ತಿಲ್ಲ.